# ಕ್ರೂರ ಲೂಟಿಕೋರ ಶೋಷಕ ವ್ಯವಸ್ಥೆಯನ್ನು ಸರಿಯಾಗಿ ಗ್ರಹಿಸೋಣ! ಈ ವ್ಯವಸ್ಥೆಯ ರಕ್ಷಣೆಗಾಗಿ ನಡೆಸುತ್ತಿರುವ ಕಪಟ ಚುನಾವಣೆಗಳನ್ನು ಬಹಿಷ್ಕರಿಸೋಣ!

**ಪ್ರಿಯ ಆದಿವಾಸಿಗಳೆ, ರೈತಕೂಲಿಗಳೆ, ನಾಡಜನರೆ,**

ನಮ್ಮ ಬದುಕಿನ ಕಷ್ಟಗಳು ದಿನೇದಿನೇ ಹೆಚ್ಚುತ್ತಿದ್ದರೂ ನಮ್ಮ ಬದುಕಿನ ಮೂಲಗಳನ್ನೇ ಬತ್ತಿಸಲಾಗುತ್ತಿದ್ದರೂ ಆಳುವವರ್ಗಗಳು ನಾಚಿಕೆ ಇಲ್ಲದೆ ಮತ್ತೊಮ್ಮೆ ನಮ್ಮೆದುರು ಚುನಾವಣಾ ನಾಟಕ ಪ್ರದರ್ಶನ ಆರಂಭಿಸಿದ್ದಾರೆ. ನಮ್ಮನ್ನು ಮರಳುಗೊಳಿಸಲು ನಾನಾ ತರಹದ ವರಸೆಗಳನ್ನು ಶುರುಹಚ್ಚಿಕೊಂಡಿದ್ದಾರೆ. ಇದುವರೆಗೂ ನಮ್ಮೆಲ್ಲರನ್ನು ಹಾಗೂ ದೇಶವನ್ನು ಸಾಮ್ರಾಜ್ಯವಾದಿಗಳಿಗೆ ಮಾರಾಟ ಮಾಡುತ್ತಾ ನಮ್ಮ ದೇಶೀಯ ವೈಜ್ಞಾನಿಕ ಹಾಗೂ ಕೈಗಾರಿಕಾ ಬೆಳವಣಿಗೆಯನ್ನು ಚಿವುಟುತ್ತಾ, ರೈತ ಕೂಲಿಗಳ ಹಾಗೂ ಕಾರ್ಮಿಕರ ಜೀವ ಹಿಂಡಿ ಹಿಪ್ಪೆ ಮಾಡುತ್ತಾ ಜನಸಾಮಾನ್ಯರ ಕಣ್ಣೀರು ಹಾಗೂ ರಕ್ತದ ಕೋಡಿ ಹರಿಸುತ್ತಾ ಚುನಾವಣಾ ಸಮಯ ಬಂದ ಕೂಡಲೆ ಮೊಸಳೆಕಣ್ಣೀರು ಸುರಿಸುತ್ತಾ ಎಂದೂ ಇಲ್ಲದ ಜನರ ಮೇಲಿನ ಕಾಳಜಿಯನ್ನು ಈಗ ಪ್ರದರ್ಶನ ಮಾಡುತ್ತಿದ್ದಾರೆ. ನಿನ್ನೆ ಕಾಂಗ್ರೆಸ್‌ನಲ್ಲಿದ್ದು ಭಾಷಣ ಭೀಷಣ ಮಾಡಿದವರು ಇಂದು ಬಿಜೆಪಿ ಸೇರುತ್ತಿದ್ದಾರೆ. ಇಂದು ಬಿಜೆಪಿಯಲ್ಲಿದ್ದವರು ನಾಳೆ ಅನಂತಕುಮಾರ್ ಬಣವಾಗುತ್ತಾರೆ. ಜೆ. ಡಿ. ಎಸ್ ಸರಿಯಿಲ್ಲ ಎಂದು ಬಿಜೆಪಿಗೆ ಹೋದವರು ಇಂದು ಬಿಜೆಪಿ ಸರಿಯಿಲ್ಲ ಕುಮಾರಣ್ಣಂಗೆ ಜೈ ಎನ್ನುತ್ತಿದ್ದಾರೆ. ಅಂದು ಕುಮಾರಣ್ಣಂಗೆ ಜೈ ಎಂದ ಚೆನ್ನಿಗಪ್ಪ ಇಂದು ಬಿಜೆಪಿ ಗೆಲುವಿಗಾಗಿ ಹಗಲಿರುಳು ದುಡಿಯುವೆ ಎನ್ನುತ್ತಿರುವುದು ಹೀಗೆ ಎಲ್ಲಾ ಪಕ್ಷಗಳಲ್ಲಿನ ಗೋಸುಂಬೆಯಾಟ ಸಾಮಾನ್ಯವಾಗಿಬಿಟ್ಟಿದೆ. ಯಾವ ಪಕ್ಷಕ್ಕೆ ಹೋದರೆ ಹೆಚ್ಚು ಹಣ ಹಾಗೂ ಲೂಟಿಯ ಅಧಿಕಾರ ಸಿಗುತ್ತದೆ ಎಂಬ ಲೆಕ್ಕಾಚಾರಗಳು ಎಲ್ಲಾ ಚುನಾವಣಾ ರಾಜಕೀಯ ಪಕ್ಷಗಳಲ್ಲಿರುವವರ ಹಗಲಿರುಳಿನ ಪ್ರಧಾನ ಕೆಲಸಗಳಾಗಿಬಿಟ್ಟಿವೆ. ಕೋಟಿಗಟ್ಟಲೆ ಅಕ್ರಮ ಗಳಿಕೆ, ಭ್ರಷ್ಟಾಚಾರ ಬಯಲಾದವರು, ಅಪ್ಪಟ ಚಿನ್ನವೆಂದು ತಮ್ಮನ್ನು ಕರೆದುಕೊಂಡು ಓಟು ಕೇಳಲು ಬರುತ್ತಿದ್ದಾರೆ.

ಕಳೆದ 61 ವರ್ಷಗಳಿಂದಲೂ ಇವುಗಳನ್ನೇ ಆಳುವ ವರ್ಗಗಳ ಎಲ್ಲಾ ರಾಜಕೀಯ ಪಕ್ಷಗಳು ಪ್ರಧಾನವಾಗಿ ಮಾಡಿಕೊಂಡು ಬಂದಿದ್ದು ಈಗಲೂ ಅದನ್ನೇ ಮುಂದುವರಿಸುತ್ತಿದ್ದಾರೆ ಅಷ್ಟೆ. ಜನರನ್ನು ಕೋಮು ವಿಷದಲ್ಲಿ ಮುಳುಗಿಸಿ, ಹೊಡೆದಾಟಕ್ಕೆ ಇಳಿಸಿ ಜನರ ಜೀವ, ರಕ್ತದೊಂದಿಗೆ ಚೆಲ್ಲಾಟವಾಡುತ್ತಾ ಆಳುವ ವರ್ಗದ ಬಂಟನಾದ ಡಿ.ವಿ. ಸದಾನಂದ ಗೌಡ ಇಂದು ಗುಳ್ಳೆನರಿಯ ನಗು ಸೂಸುತ್ತಾ ಜನರೆದುರು ಹಲ್ಲುಗಿಂಜುತ್ತಿದ್ದಾನೆ. ಇಂತಹ ಇನ್ನೂ ಹಲವಾರು ಜನರು ಜನರೆದುರು ಕೈಮುಗಿದು ಕಳ್ಳ ವಿನಮ್ರತೆ ತೋರಿಸುತ್ತಿದ್ದಾರೆ. ನರಹಂತಕ ಕಳ್ಳ ಮೋದಿಯ ಸಂತಾನಗಳು ಇಂದು ಅಭಿವೃದ್ಧಿಯ ಮಂತ್ರಗಳನ್ನು ಉದುರಿಸುತ್ತಿವೆ. ಬಂಗಾರಪ್ಪನಂತಹ ಅವಕಾಶವಾದಿ ಲೂಟಿಕೋರ ಶೋಷಕ ಈಗ ಮತ್ತೆ ಕಾಂಗ್ರೆಸ್ ಮುಖವಾಡ ತೊಟ್ಟು ಜನರ ಮುಂದೆ ಬರುತ್ತಿದ್ದಾರೆ. ಗುಲಬರ್ಗಾದ ಜನರಿಗೆ ಹೋಗಲಿ ತನ್ನ ಕ್ಷೇತ್ರದ ಜನರಿಗೇ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಕೂಡ ಕಲ್ಪಿಸಲು ಹೋಗದ ಹೇತ್ಲಾಂಡಿ ಮಲ್ಲಿಕಾರ್ಜುನ ಖರ್ಗೆಯಂತಹ ಬಲಿತ ನಾಯಕರು ಜನರೆದುರು ಬಂದು ಲೋಕಸಭೆಗೆ ಆರಿಸಿ ಕಳಿಸಿದರೆ ನಿಮ್ಮನ್ನೆಲ್ಲಾ ಉದ್ಧರಿಸುತ್ತೇನೆ ಎನ್ನುತ್ತಿದ್ದಾರೆ. ಇತ್ತ ಜೆಡಿಎಸ್ ಜಾತ್ಯಾತೀತ ಎಂದು ಬೋರ್ಡ್ ತಗುಲಿಸಿಕೊಂಡು ಜಾತಿ ರಾಜಕಾರಣ ಮಾಡುತ್ತಾ ಬ್ರಾಹ್ಮಣಶಾಹಿ ಹಿಂದೂ ಫ್ಯಾಸಿಸ್ಟ್ ಬಿಜೆಪಿಯೊಂದಿಗೆ ಅವಕಾಶವಾದಿ ಮೈತ್ರಿ ಮಾಡಿ ಬಿಜೆಪಿಗೆ ಅಧಿಕಾರ ಹಿಡಿಯಲು ದಾರಿ ಮಾಡಿಕೊಟ್ಟು ಈಗ ಮತ್ತೆ ಅಪ್ಪ ಮಕ್ಕಳು ಜನರೆದುರು ಹಲ್ಲುಗಿಂಜುತ್ತಾ ಜನಪರತೆಯ ಫೋಜು ಕೊಡುತ್ತಿದ್ದಾರೆ. ಇಂತಹವರ ಇನ್ನೂ ಹಲವಾರು ಅಣ್ಣ ತಮ್ಮ ಪುಢಾರಿಗಳು ಜನರೆದುರು ತಮ್ಮ ಒಳಗಿನ ಕೊಳೆತು ನಾರುತ್ತಿರುವ ಹುಳುಕುಗಳನ್ನು ಮರೆಯಾಗಿಸಲು ಅಚ್ಚ ಬಿಳಿಯ ಇಸ್ತ್ರಿ ಮಾಡಿದ ಬಟ್ಟೆ ಧರಿಸಿ ಜನರ ಮುಂದೆ ಮಿಂಚಲು ಯತ್ನಿಸುತ್ತಿದ್ದಾರೆ.

ನಾವು ಮತ್ತೆಮತ್ತೆ ಆಳುವ ವರ್ಗಗಳು ಈ ಚುನಾವಣಾ ಪಕ್ಷಗಳು ಮತ್ತವರ ನಾಯಕರುಗಳು ಮಾಡುತ್ತಿರುವ ಕುತಂತ್ರ ಮೋಸ ವಂಚನೆ ಶೋಷಣೆ ಮರಳುಗೊಳಿಸುವಿಕೆಗಳಿಗೆ ಬಲಿಯಾಗದೆ ಕೊಳೆತ ಈ ಶೋಷಕ ವ್ಯವಸ್ಥೆಯನ್ನೇ ಬದಲಾಯಿಸಿ ಜನಪರ ವ್ಯವಸ್ಥೆಯನ್ನು ಕಟ್ಟಬೇಕು. ಜನಸಾಮಾನ್ಯರೆಲ್ಲರ ಸರಿಸಮಾನ ಹಕ್ಕುದಾರಿಕೆಯನ್ನು ಖಾತ್ರಿಗೊಳಿಸುವ ನವ ಪ್ರಜಾತಾಂತ್ರಿಕ ವ್ಯವಸ್ಥೆಗಾಗಿನ ರಾಜಿರಹಿತ ಹೋರಾಟಕ್ಕಾಗಿ ಜನಸಾಮಾನ್ಯರೆಲ್ಲಾ ಒಗ್ಗೂಡಬೇಕು. ಅದೊಂದೇ ಪರಿಹಾರ ಮಾಗ. ಇದಕ್ಕೆ ಅಡ್ಡಹಾದಿಗಳಿಲ್ಲ. ಸ್ಪಷ್ಟ ಗ್ರಹಿಕೆಯೊಂದಿಗೆ ತ್ಯಾಗಪೂರಿತ ನಿಸ್ವಾರ್ಥದ ಹೋರಾಟ ಮಾತ್ರ ನಿಜವಾದ ಜನಪರ ವ್ಯವಸ್ಥೆಯನ್ನು ಕಟ್ಟಿ ಬೆಳೆಸಲು ದಾರಿ ಮಾಡಿಕೊಡುತ್ತದೆ.

ರೈತಾಪಿಗಳ ಜನಸಾಮಾನ್ಯರ ಹಾಗೂ ನಾಡಿನ ಬದುಕುಗಳನ್ನೇ ಸರ್ವನಾಶ ಮಾಡುವ ವಿಶೇಷ ಆರ್ಥಿಕ ವಲಯಗಳು (SEZ), ಚೆಕ್ ಡ್ಯಾಮ್‌ಗಳು, ಅರಣ್ಯ ಯೋಜನೆಗಳು ಲೂಟಿಯ ಹಾಗೂ ಮೋಜಿನ ವಿಮಾನ ನಿಲ್ದಾಣಗಳು, ಆರು ಸಾಲು ರಸ್ತೆಗಳು, ಚಿಲ್ಲರೆ ಮಾಲ್‌ಗಳು, ಚಿಲ್ಲರೆ ಸರಣಿಗಳು…… ಹೀಗೆ ಜನಸಾಮಾನ್ಯರಿಗೆ ಅನಿಷ್ಠಗಳಾಗಿರುವ ನೂರೆಂಟು ಯೋಜನೆಗಳು, ಸಂಸ್ಥೆಗಳನ್ನು ನಾಡು

ಹಾಗೂ ಜನರ ಮೇಲೆ ಬಲಾತ್ಕಾರವಾಗಿ ಹೇರುವ ಈ ಕಳ್ಳ ಪಕ್ಷಗಳು, ಅವುಗಳ ನಾಯಕರುಗಳನ್ನು ಇನ್ನೂ ನಂಬಿಕೊಂಡು ಕೂರಬೇಕೆ!? ಹಾಗೆ ನಂಬಿಕೊಂಡು ಇರುವುದೆಲ್ಲವನ್ನೂ ಕಳೆದುಕೊಂಡು ಮಕ್ಕಳ ಮುಂದಿನ ಭವಿಷ್ಯವನ್ನು ಇಲ್ಲವಾಗಿಸಿ ಕೊನೆಗೆ ಪ್ರಾಣವನ್ನೇ ತೊರೆಯಬೇಕಾದ ಪರಿಸ್ಥಿತಿಗೆ ಹೋಗಬೇಕೆ!? ಹಿಂದೂ ಫ್ಯಾಸಿಸ್ಟ್ ಗ್ಯಾಂಗ್‌ಗಳಿಗೆ, ಮೂಲಭೂತವಾದಿಗಳಿಗೆ ಬೆಂಬಲ ಕುಮ್ಮಕ್ಕು ಕೊಡುತ್ತಿರುವ ಈ ರಾಜಕೀಯ ಪಕ್ಷಗಳ ನಾಯಕರುಗಳಿಗೆ ಓಟು ನೀಡಿ ಗದ್ದುಗೆಯಲ್ಲಿ ಕೂರಿಸಬೇಕೆ!? ಇಲ್ಲಾ ಇಂತಹ ಜನಕಂಟಕ ಯೋಜನೆ ಹಾಗೂ ಸಂಸ್ಥೆಗಳನ್ನು ತಡೆದು ದೇಶವನ್ನು ಹಾಗೂ ಜನರನ್ನು ರಕ್ಷಿಸುವಂತಹ ನಮ್ಮೆಲ್ಲರ ಆದ್ಯ ಕರ್ತವ್ಯಗಳನ್ನು ಪಾಲಿಸಬೇಕೆ ಯೋಚಿಸಿ ನೋಡಿ!?

**ಅಣ್ಣತಮ್ಮಂದಿರೆ ಅಕ್ಕತಂಗಿಯರೆ ಮಕ್ಕಳೆ,**

ನಿಜವಾದ ಸ್ವಾತಂತ್ರ್ಯ ಸಮಾನತೆ ಸಹೋದರತೆ, ನಿಜವಾದ ಪ್ರಜಾಪ್ರಭುತ್ವ ಅಂದರೆ ಜನರಿದೆ ಜನರಿಗಾಗಿ ಜನರದೇ ಆದ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸಲು ನಮ್ಮ ಪಕ್ಷ ಕ್ರಾಂತಿಕಾರಿ ಸಶಸ್ತ್ರ ಹೋರಾಟವನ್ನು ದೇಶದ ಹಲವಾರು ಕಡೆಗಳಲ್ಲಿ ನಡೆಸುತ್ತಿದೆ. ಹಲವಾರು ಕೋಟಿ ಜನರು ಇಂದು ನಮ್ಮ ಪಕ್ಷದ ನಾಯಕತ್ವದಲ್ಲಿ ನಡೆಯುತ್ತಿರುವ ಕ್ರಾಂತಿಕಾರಿ ಹೋರಾಟದ ಪ್ರಭಾವದಡಿ ಇದ್ದಾರೆ. ಜನರದೇ ಆದ ಕ್ರಾಂತಿಕಾರಿ ಪಕ್ಷ ನಮ್ಮದು. ಜನರದೇ ಆದ ಸೇನೆ ಬೆಳೆಯುತ್ತಿದೆ. ಜನರಿಗಾಗಿ ಕ್ರಾಂತಿಕಾರಿ ಐಕ್ಯರಂಗ ಬೆಳೆಯುತ್ತಿದೆ.

ಅಪಾರ ತ್ಯಾಗ ಬಲಿದಾನಗಳಿಂದ ನವ ಪ್ರಜಾತಾಂತ್ರಿಕ ಸಾಮಾಜಿಕ ವ್ಯವಸ್ಥೆಯನ್ನು ನಮ್ಮ ಪಕ್ಷದ ನಾಯಕತ್ವದಡಿಯಲ್ಲಿ ಜನರು ನಿರ್ಮಿಸಿಕೊಂಡು ಬರುತ್ತಿದ್ದಾರೆ. ಆಳುವ ವರ್ಗದ ಕ್ರೂರ ಪೊಲೀಸ್ ಹಾಗೂ ಅರೆಸೈನಿಕ ಪಡೆಗಳನ್ನು ಹಿಮ್ಮೆಟ್ಟಿಸುತ್ತಾ ಭೂಮಾಲೀಕರ ಸನ್‌ಲೈಟ್ ಸೇನೆ, ರಣವೀರ ಸೇನೆಗಳಂತಹವುಗಳನ್ನು ನಿರ್ನಾಮ ಮಾಡುತ್ತಾ, ಸಲ್ವಜುಡುಂ, ಸೇಂದ್ರದಂತಹ ಆಳುವ ವರ್ಗ ರೂಪಿಸಿದ ಫ್ಯಾಸಿಸ್ಟ್ ಗ್ಯಾಂಗ್‌ಗಳನ್ನು ಮಣ್ಣು ಮುಕ್ಕಿಸುತ್ತಾ ಭಾರತದ ಕ್ರಾಂತಿಕಾರಿ ಚಳುವಳಿ ಮುನ್ನಡೆಯುತ್ತಿದೆ. ದೇಶದ ಬಹುತೇಕ ರಾಜ್ಯಗಳಲ್ಲಿ ನಮ್ಮ ಪಕ್ಷ ಕಾರ್ಯನಿರ್ವಹಿಸುತ್ತಿದೆ. ಕೆಲವು ರಾಜ್ಯಗಳಲ್ಲಿ ಬಲಿಷ್ಠವಾಗಿದೆ.

ಭಾರತದಲ್ಲಿನ ಕ್ರಾಂತಿಕಾರಿಗಳು ಮಹಾನ್ ಐಕ್ಯತೆ ಸಾಧಿಸಿ ಕ್ರಾಂತಿಯ ನಡೆಗಳನ್ನು ಬಿರುಸುಗೊಳಿಸುತ್ತಾ ಸಾಗುತ್ತಿದೆ. ಅಪಾರವಾಗದ ತ್ಯಾಗ ಬಲಿದಾನಗಳನ್ನು ಮಾಡಿ ಈ ಸಾಧನೆಗಳನ್ನು ಸಾಧಿಸಿದೆ. ಜನರದೇ ಆದ ಪರ್ಯಾಯ ರಾಜಕೀಯ ಅಧಿಕಾರದ ಅಂಗಗಳನ್ನು ಕೆಳಗಿನಿಂದ ಮೇಲಕ್ಕೆ ನಿರ್ಮಿಸಿಕೊಂಡು ಬರಲಾಗುತ್ತಿದೆ. ಹೋಬಳಿ, ತಾಲೂಕು, ವಲಯ ಮಟ್ಟ, ಪ್ರಾದೇಶಿಕ ಮಟ್ಟಗಳಲ್ಲಿ ಅಂತಹ ಜನರ ಅಧಿಕಾರದ ಅಂಗಗಳನ್ನು ಬೆಳೆಸಲಾಗುತ್ತಿದೆ. ಕರ್ನಾಟಕದ ಮಲೆನಾಡು ಕರಾವಳಿಗಳಲ್ಲಿ ನಮ್ಮ ಪಕ್ಷದ ನಾಯಕತ್ವದಲ್ಲಿ ಜನತೆಯ ಕ್ರಾಂತಿಕಾರಿ ಸಶಸ್ತ್ರ ಹೋರಾಟ ನಡೆಯುತ್ತಿರುವುದು ನಿಮಗೆಲ್ಲಾ ತಿಳಿದಿರುವ ಸಂಗತಿ. ಜನತೆಯ ಕ್ರಾಂತಿಕಾರಿ ಸಶಸ್ತ್ರ ಹೋರಾಟವನ್ನು ಬಲಿಷ್ಠಗೊಳಿಸಬೇಕಾದ ಕರ್ತವ್ಯ ನಮ್ಮೆಲ್ಲರದಾಗಿದೆ.

ಹಾಗಾಗಿ ಈ ಕಳ್ಳಸುಳ್ಳ ಶೋಷಕ ಶಕ್ತಿಗಳು ನಡೆಸುವ ಕಪಟ ಚುನಾವಣಾ ನಾಟಕಗಳನ್ನು ಬಹಿಷ್ಕರಿಸೋಣ. ನವ ಪ್ರಜಾಸತ್ತಾತ್ಮಕ ಕ್ರಾಂತಿಗಾಗಿ ಜನಸಮಾನ್ಯರೆಲ್ಲಾ ಒಗ್ಗೂಡೋಣ ಮತ್ತು ಒಗ್ಗೂಡಿಸೋಣ.

- ★ ಕಪಟ ಚುನಾವಣೆಗಳನ್ನು ಬಹಿಷ್ಕರಿಸೋಣ!
  ನಿಜವಾದ ಜನರಿಂದ ಜನರಿಗೆ ಜನರದೇ ಆದ ವ್ಯವಸ್ಥೆಯನ್ನು ಕಟ್ಟಿ ಬೆಳೆಸೋಣ!
- ★ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಇತ್ಯಾದಿ ಎಲ್ಲಾ ಚುನಾವಣಾ ಪಕ್ಷಗಳು ಆಳುವ ವರ್ಗಗಳ ಸಾಕುನಾಯಿಗಳು!
- ★ ಕಳ್ಳ ಓಟು ಸುಳ್ಳು ನೋಟು ರಾಜ್ಯವೊಂದು ರಾಜ್ಯವೇ?
  ಕಳ್ಳ ಬಡ್ಡಿಮಕ್ಕಳಾಳೋ ದೇಶವೊಂದು ದೇಶವೇ!
- ★ ಕಪಟ ಚುನಾವಣೆಗಳನ್ನು ಬಹಿಷ್ಕರಿಸಿ, ಜನವಿರೋಧಿ ಎಸ್ ಇಝಡ್,
  ಡ್ಯಾಮ್ ಇತ್ಯಾದಿ ಯೋಜನೆಗಳನ್ನು ಒದ್ದೋಡಿಸೋಣ!
- ★ ಅಂಗೈಯನು ಅಡ್ಡಹಿಡಿದು ಸೂರ್ಯಕಾಂತಿ ತಡೆಯಲಾಗದು
  ದಮನ ಶೋಷಣೆ ಮುಂದುವರಿಸಿ ಜನರ ಶಕ್ತಿ ತಡೆಯಲಾಗದು!
- ★ ಜನವಿರೋಧಿ ಫ್ಯಾಸಿಸ್ಟ್ ಶಕ್ತಿಗಳನ್ನು ಬಗ್ಗುಬಡಿಯೋಣ!
- ★ ನವ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಯಶಸ್ವಿಗೊಳಿಸೋಣ!
- ★ ಸಿಪಿಐ (ಮಾವೋವಾದಿ) ಜಿಂದಾಬಾದ್!

ಕ್ರಾಂತಿಕಾರಿ ಶುಭಾಶಯಗಳು.

ಸಿಪಿಐ (ಮಾವೋವಾದಿ)
ದೃಕ್ಪಥ ಪ್ರದೇಶ
ಕರ್ನಾಟಕ

23/03/2009